# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ, ೨೦, ಫೆಬ್ರವರಿ, ೨೦೨೬(ಫಾಲ್ಗುಣ, ೦೧, ಶಕವರ್ಷ, ೧೯೪೭)<br>BENGALURU, FRIDAY, 20, FEBRUARY, 2026(PHALGUNA , 01, SHAKAVARSHA, 1947) | ನಂ. ೧೬೫<br>No. 165 |
|---|---|---|


## ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

## ಅಧಿಸೂಚನೆ

ನಂ.ಚು(2)ವಿವ/121(ಕೊರಟಗೆರೆ)/2025–26 ದಿನಾಂಕ:20.02.2026

ನಗರಾಭಿವೃದ್ಧಿ ಇಲಾಖೆಯು, ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ನಅಇ 73 ಎಂಎಲ್ಆರ್ 2025(e) ದಿನಾಂಕ:31.12.2025 ರಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹಾಲಿ ಪಟ್ಟಣ ಪಂಚಾಯಿತಿಯನ್ನೊಳಗೊಂಡಂತೆ **ಹೂಲೀಕುಂಟೆ ಗ್ರಾಮ ಪಂಚಾಯಿತಿ** ವ್ಯಾಪ್ತಿಯ ಹೂಲೀಕುಂಟೆ, ಹೂಲೀಕುಂಟೆ ಮಜರೆ ಗುಂಡಿನಪಾಳ್ಯ (ಚಿಕ್ಕನಹಳ್ಳಿ)(ಮ), ದೇವರಹಳ್ಳಿ, ಕರೇಕಲ್ಲಹಟ್ಟಿ(ಮ), ಕಾಮೇನಹಳ್ಳಿ, ಹರಿಜನಕಾಲೋನಿ(ಮ), ಹೊಸಹಳ್ಳಿ, ಲಂಬಾಣಿತಾಂಡ(ಮ), ಮುಗ್ಗೀರನಕಾಲುವೆ(ಬೇ), ಓಬಳದೇವರಹಳ್ಳಿ, ಗುಂಡಿನಪಾಳ್ಯ, ಚಿಕ್ಕೇಗೌಡನಹಳ್ಳಿ, ಕಾಮರಾಜನಹಳ್ಳಿ, ಕೊರಟಗೆರೆ ಗ್ರಾಮಾಂತರ ಹರಿಹರಪ್ಪನಪಾಳ್ಯ, **ತುಂಬಾಡಿ ಗ್ರಾಮಪಂಚಾಯಿತಿ ವ್ಯಾಪ್ತಿಯ** ಕಂಬದಹಳ್ಳಿ, **ಹಂಚೀಹಳ್ಳಿ ಗ್ರಾಮ ಪಂಚಾಯಿತಿ** ವ್ಯಾಪ್ತಿಯ ಬೋಡಬಂಡೇನಹಳ್ಳಿ, ಮಲ್ಲೇಶಪುರ ಹಾಗೂ **ಜಟ್ಟಿ ಅಗ್ರಹಾರ (ಅಗ್ರಹಾರ) ಗ್ರಾಮಪಂಚಾಯಿತಿ** ವ್ಯಾಪ್ತಿಯ ಜಂಪೇನಹಳ್ಳಿ, ಕಲ್ಲುಗುಟ್ಟರಹಳ್ಳಿ, ಕೃಷ್ಣರಾಜಪುರ(ಮ), ಕೋಡಿಪಾಳ್ಯ (ಕುರುಡೀಪಾಳ್ಯ)(ಮ), ಶಿವಪುರ(ಮ), ಬಳೇವೀರನಹಳ್ಳಿ ಮತ್ತು ಜಟ್ಟಿ ಅಗ್ರಹಾರ (ಅಗ್ರಹಾರ) ಗ್ರಾಮಗಳನ್ನು 'ಸಣ್ಣ ನಗರ ಪ್ರದೇಶ'ವೆಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು **"ಕೊರಟಗೆರೆ ಪುರಸಭೆ"** ಯ ಪ್ರದೇಶವೆಂದು ಪದನಾಮೀಕರಿಸಿ ಅಧಿಸೂಚನೆಯನ್ನು ಪ್ರಕಟಿಸಿದ ಮೇರೆಗೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993 ರ 4ನೇ ಪ್ರಕರಣದ ಉಪಪ್ರಕರಣ (2)(ಇ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 'ಸಣ್ಣ ನಗರ ಪ್ರದೇಶ'ವೆಂದು ಉದ್ಘೋಷಿಸಿರುವ ಗ್ರಾಮಗಳು ಪಂಚಾಯತಿ ಪ್ರದೇಶವಾಗಿರುವುದು ನಿಂತು ಹೋಗತಕ್ಕದ್ದೆಂದು ಘೋಷಿಸಿ, ಕೋಷ್ಟಕ 'ಅ' ರಲ್ಲಿನ ವಿವರಗಳಂತೆ ಉಳಿಕೆ ಗ್ರಾಮಗಳನ್ನು ಭೌಗೋಳಿಕವಾಗಿ ಹತ್ತಿರದ ಗ್ರಾಮ ಪಂಚಾಯಿತಿಗಳಿಗೆ ಸೇರ್ಪಡೆ ಮಾಡಲು ಮತ್ತು ಹೊಸದಾಗಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ ರಚಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993 ರ 4ನೇ ಪ್ರಕರಣದ ಉಪಪ್ರಕರಣ (1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪಿಗಳ ಕರಡು ಅಧಿಸೂಚನೆಯನ್ನು ದಿನಾಂಕ:12.02.2026 ರಂದು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಾಗಿತ್ತು.

ಸದರಿ ಕರಡು ಅಧಿಸೂಚನೆಯಿಂದ ಭಾಧಿತರಾಗಬಹುದಾದಂಥ ವ್ಯಕ್ತಿಗಳು ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಯ ದಿನಾಂಕ ಅಂದರೆ ದಿನಾಂಕ:12.02.2026 ರಿಂದ 7 (ಏಳು) ದಿವಸಗಳ ಒಳಗಾಗಿ ಆಕ್ಷೇಪಣೆಗಳನ್ನು

ಖುದ್ದಾಗಿ/ಅಂಚೆಯ ಮೂಲಕ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮಿನಿವಿಧಾನ ಸೌಧ, ತುಮಕೂರು ಜಿಲ್ಲೆ, ತುಮಕೂರು–572 101 ವಿಳಾಸಕ್ಕೆ ಸಲ್ಲಿಸಬಹುದೆಂದು ತಿಳಿಸಲಾಗಿತ್ತು, ಆದರೆ ಪ್ರಕಟಿಸಲಾಗಿದ್ದ ಕರಡು ಅಧಿಸೂಚನೆಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿ **ಶುಭ ಕಲ್ಯಾಣ, ಭಾ.ಆ.ಸೇ.,** ಆದ ನಾನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993 ರ 4ನೇ ಪ್ರಕರಣದ ಉಪಪ್ರಕರಣ (2)(ಇ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 'ಸಣ್ಣ ನಗರ ಪ್ರದೇಶ'ವೆಂದು ಉದ್ಘೋಷಿಸಿರುವ ಗ್ರಾಮಗಳು ಪಂಚಾಯತಿ ಪ್ರದೇಶವಾಗಿರುವುದು ನಿಂತು ಹೋಗತಕ್ಕದ್ದೆಂದು ಘೋಷಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993 ರ 4ನೇ ಪ್ರಕರಣದ ಉಪಪ್ರಕರಣ (1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಪತ್ರ ಹೊರಡಿಸಿರುವ ದಿನಾಂಕ 31.12.2025 ರಿಂದಲೇ ಜಾರಿಗೆ ಬರುವಂತೆ ಕೊರಟಗೆರೆ ತಾಲ್ಲೂಕಿನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 'ಸಣ್ಣ ನಗರ ಪ್ರದೇಶ'ವೆಂದು ಉದ್ಘೋಷಿಸಿರುವ ಗ್ರಾಮಗಳನ್ನು ಹೊರತುಪಡಿಸಿ ಉಳಿದ ಗ್ರಾಮಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಮರುವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ 'ಅ' ದಲ್ಲಿರುವಂತೆ ನಿರ್ಣಯಿಸಿದೆ. 'ಅ' ಕೋಷ್ಟಕದ 2 ನೇ ಅಂಕಣದಲ್ಲಿ ನಮೂದಿಸಿರುವ 10–ಅಕ್ಕಿರಾಂಪುರ ಮತ್ತು 16–ಕ್ಯಾಮೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಕೋಷಕದ 4 ಮತ್ತು 5 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಂದು ಹಾಗೂ ಕೋಷಕದ 3 ನೇ ಅಂಕಣದಲ್ಲಿ ಹೊಸದಾಗಿ ರಚಿಸಿರುವ 5–ಥರಟಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಕೋಷಕದ 5 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಂದು ನಿಗಧಿಪಡಿಸಿ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಿರುತ್ತೇನೆ.

ಕೋಷ್ಟಕ 'ಅ'

| ಕ್ರ ಸಂ. | ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಹೊಸದಾಗಿ ರಚಿಸಿರುವ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಪ್ರಸ್ತುತ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು | ಹೊಸದಾಗಿ ಸೇರ್ಪಡೆಗೊಂಡಿರುವ/ರಚಿಸಿರುವ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
|---|---|---|---|---|
| 1 | 2 | 3 | 4 | 5 |
| 1. | 10–ಅಕ್ಕಿರಾಂಪುರ | – | ಅಕ್ಕಿರಾಂಪುರ–1, 3 (ಹರಿಜನ ಕಾಲೋನಿ ಸಂತೆ ಮೈದಾನ, ಹೊಸ ಬಡಾವಣೆ), ಎ)ಅಕ್ಕಿರಾಂಪುರ–ಕತ್ತಿನಾಗೇನಹಳ್ಳಿ ರಸ್ತೆ ಎಡ ಮತ್ತು ಬಲಭಾಗ, ಬಿ)ಅಕ್ಕಿರಾಂಪುರ–ಸೋಂಪುರ ರಸ್ತೆ ಎಡ ಮತ್ತು ಬಲಭಾಗ, ಸಿ)ಕೆರೆ–ಕಾಲುವೆ ಎಡಭಾಗ, ಅಕ್ಕಿರಾಂಪುರ–2, ಎ)ಅಕ್ಕಿರಾಂಪುರ–ಬೈರೇನಹಳ್ಳಿ ರಸ್ತೆ ಎಡ ಮತ್ತು ಬಲಭಾಗ, ಬಿ)ಕೆರೆ ಕಾಲುವೆ ಬಲಭಾಗ, ಅಕ್ಕಿರಾಂಪುರ ಮಜರೆ ಹೊಸಹಳ್ಳಿ, ಕಾದಿಲಾಪುರ(ಮ), ಭದ್ರಯ್ಯನಪಾಳ್ಯ(ಮ), ಆರ್.ವೆಂಕಟಾಪುರ, ಕತ್ತಿನಾಗೇನಹಳ್ಳಿ, ಸೋಂಪುರ, ಸೋಂಪುರ ಮಜರೆ ಜಯಪುರ(ಮ), ಸೋಂಪುರ ಮಜರೆ ಅಮ್ಮನಹಳ್ಳಿ(ಮ), ಕುರುಬರಹಳ್ಳಿ | ಗೌರಗಾನಹಳ್ಳಿ, ಗೊಲ್ಲರಹಟ್ಟಿ(ಮ) |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕ್ರ ಸಂ. | ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಹೊಸದಾಗಿ ರಚಿಸಿರುವ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಪ್ರಸ್ತುತ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು | ಹೊಸದಾಗಿ ಸೇರ್ಪಡೆಗೊಂಡಿರುವ/ರಚಿಸಿರುವ ಗ್ರಾಮ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
|---|---|---|---|---|
| 1 | 2 | 3 | 4 | 5 |
| 2. | 16–ಕ್ಯಾಮೇನಹಳ್ಳಿ | – | ಕ್ಯಾಮೇನಹಳ್ಳಿ, ಕ್ಯಾಮೇನಹಳ್ಳಿ ದೇವಸ್ಥಾನ, ಹೊಸಹಳ್ಳಿ, ಬಿದಲೋಟಿ, ಶಾಂತಲಿಂಗಯ್ಯನಪಾಳ್ಯ(ಮ), ಕೋಡ್ಲಹಳ್ಳಿ, ಹುಚ್ಚವೀರಯ್ಯನಪಾಳ್ಯ(ಮ), ವೀರಯ್ಯನಪಾಳ್ಯ(ಮ), ಮಾಳೇನಹಳ್ಳಿ, ಹೊನ್ನಾರನಹಳ್ಳಿ, ರಾಜಯ್ಯನಪಾಳ್ಯ(ಮ), ಚಿಕ್ಕೋಹಳ್ಳಿ, ಚಿಂಪುಗೋನಹಳ್ಳಿ(ಮ), ಹರಿಜನ ಕಾಲೋನಿ(ಮ), ಬುಡಮಾರನಹಳ್ಳಿ, ಶಕುನಿತಿಮ್ಮನಹಳ್ಳಿ, ಕಳ್ಳಿಪಾಳ್ಯ(ಮ), ಲಂಬಾಣಿ ತಾಂಡ(ಮ), ಸಿರಿಗೋನಹಳ್ಳಿ, ಲಂಬಾಣಿ ತಾಂಡ(ಮ) | ಸೊಣ್ಣೇನಹಳ್ಳಿ, ಹುಲುಗೊಂಡನಹಳ್ಳಿ, ಗಂಟಿಗಾನಹಳ್ಳಿ, ಕುರುಬರ ಗಂಟಿಗಾನಹಳ್ಳಿ (ಮ) |
| 3. | 5– ಜಟ್ಟಿ ಅಗ್ರಹಾರ (ಅಗ್ರಹಾರ) | 5–ಥರಟಿ | ಜಟ್ಟಿ ಅಗ್ರಹಾರ (ಅಗ್ರಹಾರ), ಜಂಪೇನಹಳ್ಳಿ, ಕಲ್ಲುಗುಟ್ಟರಹಳ್ಳಿ, ಕೃಷ್ಣರಾಜಪುರ(ಮ), ಕೋಡಿಪಾಳ್ಯ (ಕುರುಡೀಪಾಳ್ಯ)(ಮ), ಶಿವಪುರ(ಮ), ಬಳೇವೀರನಹಳ್ಳಿ, ಜಗನ್ನಾಥಪುರ, ನವಿಲಕುರಿಕೆ, ದಮಗಲಯ್ಯನಪಾಳ್ಯ(ಮ), ಜನತಾ ಕಾಲೋನಿ(ಮ), ಗೊಲ್ಲದೇವನಹಳ್ಳಿ, ಥರಟಿ, ಅಜ್ಜೀಹಳ್ಳಿ(ಮ), ಬೋವಿಕಾಲೋನಿ(ಮ), ಚನ್ನಪಟ್ಟಣ, ದೊಡ್ಡನರಸಯ್ಯನಪಾಳ್ಯ(ಮ), ತಿಗಳರಪಾಳ್ಯ(ಮ), ಕುರಿತಿಮ್ಮನಹಳ್ಳಿ(ಮ), ಕಲ್ಲುಮನೆ ತೋಟ(ಮ), ಕಂಬದಹಳ್ಳಿ, ಗೊಲ್ಲರಹಟ್ಟಿ(ಮ) | ಜಗನ್ನಾಥಪುರ, ನವಿಲಕುರಿಕೆ, ದಮಗಲಯ್ಯನಪಾಳ್ಯ(ಮ), ಜನತಾ ಕಾಲೋನಿ(ಮ), ಗೊಲ್ಲದೇವನಹಳ್ಳಿ, ಥರಟಿ, ಅಜ್ಜೀಹಳ್ಳಿ(ಮ), ಬೋವಿಕಾಲೋನಿ(ಮ), ಚನ್ನಪಟ್ಟಣ, ದೊಡ್ಡನರಸಯ್ಯನಪಾಳ್ಯ(ಮ), ತಿಗಳರಪಾಳ್ಯ(ಮ), ಕುರಿತಿಮ್ಮನಹಳ್ಳಿ(ಮ), ಕಲ್ಲುಮನೆ ತೋಟ(ಮ), ಕಂಬದಹಳ್ಳಿ, ಗೊಲ್ಲರಹಟ್ಟಿ(ಮ) |

ಈ ಅಂತಿಮ ಅಧಿಸೂಚನೆಯಿಂದ ಭಾಧಿತರಾದ ವ್ಯಕ್ತಿಗಳು ಮೇಲ್ಮನವಿಗಳನ್ನು ಸಲ್ಲಿಸಲು ಇಚ್ಛಿಸಿದಲ್ಲಿ ದಿನಾಂಕ:20.02.2026 ರಿಂದ 21.03.2026 ಸಂಜೆ 5.00 ಗಂಟೆಯ ಒಳಗಾಗಿ ಕಾರಣ ಸಹಿತವಾಗಿ ಪ್ರಾದೇಶಿಕ ಆಯುಕ್ತರು, ಕಂದಾಯ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು ರವರಿಗೆ ಸಲ್ಲಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993 ರ 4ನೇ ಪ್ರಕರಣದ ಉಪಪ್ರಕರಣ (3)ರಡಿ ಅವಕಾಶ ಕಲ್ಪಿಸಿದೆ.

(ಶುಭ ಕಲ್ಯಾಣ್ ಭಾ.ಆ.ಸೇ)
ಜಿಲ್ಲಾಧಿಕಾರಿ
ತುಮಕೂರು ಜಿಲ್ಲೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH